

# ಬಣ್ಣ ಬಣ್ಣ

■ **ಮಲ್ಲಿಕಾರ್ಜುನ ಸುರಧೇನುಪುರ**
ಕಲೆ: ಸಂತೋಷ್ ಸಸಿಹಿತ್ಲು

ನೀಲಾಕಾಶಕೆ ನೀಲಿಯ ಬಣ್ಣ
ಬಳಿದೋರು ಯಾರೋ ಅಣ್ಣ
ಸಾಗರದ ಆಳಕೂ ನೀಲಿಯ
ಸುರಿದೋರು ಯಾರೋ ಅಣ್ಣ

ಬಳ್ಳಿಗೂ ಹಸಿರು ಎಲೆಗೂ ಹಸಿರು
ಮಲ್ಲಿಗೆ ಹೂಗಳಿಗೆ ಬಿಳಿಯ ಬಣ್ಣ
ಕಲಸುಮೇಲೋಗರ ಇಲ್ಲದೆ
ಬೆಳೆಸೋರು ಯಾರೋ ಅಣ್ಣ

ಹಸುಗಳ ಮೈಗೆ ವಿಧ ವಿಧ ಬಣ್ಣ
ಹಾಲಿಗೆ ಮಾತ್ರ ಬಿಳಿಯ ಬಣ್ಣ
ಹಾಲನು ಕುಡಿವ ಜನರ ಬಣ್ಣ
ಒಂದಾ ಎರಡಾ, ಬಗೆ ಬಗೆ ಬಣ್ಣ

ಎಡೆಬಿಡದೆ ದುಡಿಯುವ ದಿನಕರ
ಕಾಮನಬಿಲ್ಲನ್ನು ಕಟ್ಟುವನಣ್ಣ
ತನ್ನಯ ಕಿರಣಗಳಿಂದಲೆ ಏಳು ಬಣ್ಣ
ತನ್ಮಯದಿಂದ ಸವರುವನಣ್ಣ .

ಬುಗುರಿಯ ತೆರದಿ ಗಿರ್ರನೆ ತಿರುಗೊ
ಭೂಮಿಯ ಚಲನೆ ಕಾಣದೊ ಅಣ್ಣ
ಕಾಣುವ ಕಣ್ಣಿಗೆ ಕಂಗೊಳಿಸಿವೆ
ಭೂಮಿಯ ಮೇಲೆ ವಿಧ ವಿಧ ಬಣ್ಣ ■

## ಕುಂಚ ಪ್ರಪಂಚ





**ಸಿರಿ ಎಸ್**
8ನೇ ತರಗತಿ, ಮಹರ್ಷಿ ಪಬ್ಲಿಕ್ ಸ್ಕೂಲ್, ಮೈಸೂರು



**ಅಚ್ಯುತಾನಂದ**
3ನೇ ತರಗತಿ, ಡ್ರೀಮ್ ವರ್ಲ್ಡ್ ಸ್ಕೂಲ್, ಬಳ್ಳಾರಿ









**ಧ್ವನಿ ಡಿ.**
6ನೇ ತರಗತಿ, ಬಿಷಪ್ ಸಾರ್ಜೆಂಟ್ ಸ್ಕೂಲ್, ತುಮಕೂರು

ಮಕ್ಕಳೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ, ಭಾವಚಿತ್ರದೊಂದಿಗೆ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in